ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) – ಇಲ್ಲ –

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

450 ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಎಸ್.ಐ.ಡಿ.ಸಿ. ವಸಾಹತುನಲ್ಲಿರುವ ಬಾಡಿಗೆ ಪಡೆದು ಓ.ವೈ.ಓ.ಎಸ್.ಎಸ್. ಅಡಿಯಲ್ಲಿ ಇನ್ನೂ ಉಪಯೋಗ ಪಡೆಯದೆ ಇರುವ ಕೈಗಾರಿಕಾ ವಸಾಹತುಗಳು ಎಷ್ಟು;

ಆ) ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕೆಯನ್ನು 25 ವರ್ಷಗಳಿಂದ ನಡೆಸುತ್ತಾ ಬಂದಿರುವವರಿಗೆ ಉಚಿತವಾಗಿ ಬಡ್ಡಿ ಇಲ್ಲದೆ ಮೂಲ ಬೆಲೆಯಲ್ಲಿ ಅವರು ಉಪಯೋಗಿಸುತ್ತಾ ಬಂದಿರುವ ಷೆಡ್ಡುಗಳನ್ನು ಓ.ವೈ.ಎಸ್.ಎಸ್. ಅಡಿಯಲ್ಲಿ ಕೊಡಲಾಗುತ್ತಿದೆಯೇ;

ಇ) ಓ.ವೈ.ಓ.ಎಸ್.ಎಸ್. ಯೋಜನೆಯಡಿಯಲ್ಲಿ ಅತಿ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ಬಡ್ಡಿ ವಿಧಿಸುತ್ತಿರುವುದೆ?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಸರ್ಕಾರವು ಓ.ವೈ.ಓ.ಎಸ್.ಎಸ್. ಸೌಲಭ್ಯವನ್ನು ಹತ್ತು ಬಾರಿ ವಿಸ್ತರಿಸಿರುತ್ತದೆ. ಇತ್ತೀಚೆಗೆ ಸರ್ಕಾರವು ದಿನಾಂಕ: 30–07–2009ರ ಸರ್ಕಾರಿ ಆದೇಶ ಸಂಖ್ಯೆ: ಸಿಐ 115 ಸಿಎಸ್‌ಸಿ 2009 ರಂತೆ ಸದರಿ ಯೋಜನೆಯನ್ನು ದಿನಾಂಕ: 30–09–2009 ರವರೆವಿಗೆ ವಿಸ್ತರಿಸಲಾಗಿರುತ್ತದೆ.

ಅದರಂತೆ, ಕೆ.ಜಿ.ಎಫ್ ಕೈಗಾರಿಕಾ ವಸಾಹತುವಿನಲ್ಲಿ – 3, ಶಹಬಾದ್ ಕೈಗಾರಿಕಾ ವಸಾಹತುವಿನಲ್ಲಿ – 3, ಹಾಸನ ಕೈಗಾರಿಕಾ ವಸಾಹತುವಿನಲ್ಲಿ – 2, ಹಾಗೂ ಕಡೂರು–ಬೀರೂರು ಕೈಗಾರಿಕಾ ವಸಾಹತುವಿನಲ್ಲಿ – 2 ಹಂಚಿಕೆದಾರರಿಗೆ ಯೋಜನೆಯನ್ನು ವಿಸ್ತರಿಸಲಾಗಿದ್ದು, ಹಾಸನ ಕೈಗಾರಿಕಾ ವಸಾಹತುವಿನ ಒಬ್ಬ ಹಂಚಿಕೆದಾರರು ಮಾತ್ರ ಸದರಿ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ.

ಆ) ಸರ್ಕಾರಿ ಆದೇಶದಂತೆ ಓ.ವೈ.ಓ.ಎಸ್.ಎಸ್. ಅಡಿಯಲ್ಲಿ ಮಳಿಗೆಗಳನ್ನು ಉಚಿತವಾಗಿ ಬಡ್ಡಿ ಇಲ್ಲದೆ, ಹಂಚಿಕೆ ಸಮಯದಲ್ಲಿನ ಮೂಲ ಬೆಲೆಗೆ ನೀಡಲು ಅವಕಾಶವಿರುವುದಿಲ್ಲ.

ಇ) ಸರ್ಕಾರಿ ಆದೇಶ ಸಂಖ್ಯೆ: ಸಿಐ 93 ಸಿಎಸ್‌ಸಿ 2005 ದಿನಾಂಕ: 28–03–2005 ರಂತೆ ಓ.ವೈ.ಓ.ಎಸ್.ಎಸ್. ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ಮಳಿಗೆಗಳ ಹಂಚಿಕೆದಾರರಿಗೆ ಶೇ.11 ಮತ್ತು ಶೇ.8 ರಂತೆ (ಕ್ರಮವಾಗಿ 1980 ಮತ್ತು 1988ರ ಸರ್ಕಾರಿ ಆದೇಶಗಳ ಅಡಿಯಲ್ಲಿ ಹಂಚಿಕೆಯಾಗಿರುವ ಮಳಿಗೆಗಳಿಗೆ) ಬಡ್ಡಿಯನ್ನು ಆಕರಿಸಲಾಗುತ್ತಿದೆ.

453 ಶ್ರೀ ಕೃಷ್ಣ ಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಸರ್ಕಾರ ಇದುವರೆಗೂ ಸಮರ್ಪಕವಾಗಿ ಬಿಡುಗಡೆ ಮಾಡದಿರಲು ಕಾರಣವೇನು;

ಆ) ಸರ್ಕಾರವು ಈ ಸಾಲಿನಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನವನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಿದೆಯೇ? ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) 2008–09ನೇ ಸಾಲಿನಲ್ಲಿ ರೂ.200.00 ಕೋಟಿಗಳನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿತ್ತು. ರೂ.150.00 ಕೋಟಿಗಳನ್ನು ಶಾಸಕರಿಗೆ ತಲಾ ರೂ.50.00 ಲಕ್ಷದಂತೆ ಬಿಡುಗಡೆ ಮಾಡಲಾಯಿತು. ಪೂರಕ ಅಂದಾಜಿನಲ್ಲಿ ರೂ.100.00 ಕೋಟಿಗಳನ್ನು ಆರ್ಥಿಕ ಇಲಾಖೆಯು ಒದಗಿಸಿತು. ಆದರೆ, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ 2ನೇ ಕಂತಿನ ಅನುದಾನದ ತಲಾ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಲಿಲ್ಲ.

ಹಾಗಿದ್ದರೂ, 2009–10ನೇ ಸಾಲಿನಲ್ಲಿ ರೂ.350.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು (ಕಳೆದ ವರ್ಷದ ರೂ.150.00